DEMAND No. 54—ADVANCES AND LOANS

"That a sum of Rs. 2,22,67,085 be granted to cover the excess expenditure incurred over the Voted Grants for the year 1968-69 in respect of Advances and Loans."

KARNATAKA HOUSING BOARD (Amendment) BILL 1974

Motion to Consider.

Mr. Deputy SPEAKER:—The Hon. Member, Sri Bangarappa may continue his speech on the Karnataka Housing Board (Amendment) Bill, 1974.

ಶ್ರೀ ಎಸ್. ಬಂಗಾರಪ್ಪ (ಸೊರಬ) :—ಮಾನ್ಯ ಅಧ್ಯಕ್ಷರೇ, ನಾನು ನಿನ್ನೆ ಕರ್ನಾಟಕ ಗೃಹ ಮಂಡಳಿ ತಿದ್ದುಪಡಿ ಮಸೂದೆಯ ಮೇಲೆ ಮಾತನಾಡುತ್ತಾ, ಈ ಕರ್ನಾಟಕ ಗೃಹ ಮಂಡಲಿ ಮೇಲೆ ತನ್ನ ನೇರವಾದ ಹತೋಟಿಯನ್ನಿಟ್ಟುಕೊಳ್ಳಬೇಕು ಎನ್ನುವ ಉದ್ದೇಶದಿಂದ ಅದಕ್ಕಾಗಿ ಈ ಒಂದು ಸಂಚನ್ನೇ ಈ ತಿದ್ದುಪಡಿ ಮಸೂದೆಯಲ್ಲಿ ತಂದಿದ್ದಾರೆ ಎನ್ನತಕ್ಕ ಅಭಿಪ್ರಾಯದಲ್ಲಿ ನಾನು ಹೇಳಿದೆ.

ಮಾನ್ಯ ಅಧ್ಯಕ್ಷರೆ, ನಿನ್ನೆ ನಾನು ಮಾತನಾಡುವಾಗ, ಈ ತಿದ್ದುಪಡಿ ಮಸೂದೆಯಲ್ಲಿ ಹೊಸದಾಗಿ ತಂದಿರತಕ್ಕ ಸೆಕ್ಷನ್ ೮೭(ಎ) ಈ ವಿಷಯವನ್ನು ಕುರಿತು ಮಾತನಾಡುತ್ತಿದೆ. ಇದರಲ್ಲಿ ಕಂಟ್ರೋಲ್ ಬೈ ದಿ ಸ್ಟೇಟ್ ಗೌವರ್ನಮೆಂಟ್. ಯಾವ ರೀತಿ ಸರಕಾರ ಗೃಹ ಮಂಡಲಿ ಮೇಲೆ ಸಂಪೂರ್ಣ ಹತೋಟಿಯನ್ನು ಇಟ್ಟುಕೊಳ್ಳಬಹುದು ಎನ್ನುವ ವಿಷಯವನ್ನು ಹೇಳತಕ್ಕಂಥ ಮಾತನ್ನು ಉಲ್ಲೇಖ ಮಾಡಿದ್ದಾರೆ. "The State Government shall have general administrative control and supervision over all the activities and affairs of the Board." ಇದು ಸಂಪೂರ್ಣವಾಗಿ ಇವತ್ತು ಜನತಾ ಪ್ರತಿನಿಧಿಗಳಾಗಿರತಕ್ಕ ಇಂಥ ಮಂಡಲಿಗಳ ಸಂಪೂರ್ಣ ಅಧಿಕಾರವನ್ನು ಕಿತ್ತುಹಾಕಿ ಯಾವ ರೀತಿ ಅಟಾನಮಸ್ ಬಾಡೀಸ್ ಇರುತ್ತವೋ ಅವುಗಳಿಗೆ ಇರುವ ಸ್ವಾಯತ್ತತೆ ಸಂಪೂರ್ಣವಾಗಿ ಸರಕಾರ ಸ್ವಾಹ ಮಾಡುವ ತಿದ್ದುಪಡಿ ಮಸೂದೆ. ಆದರೆ ತಾವು "and supervision over all the activities" ಎಂದು ಹೇಳಿದ್ದೀರಿ. ಅಂದರೆ ಗೃಹ ಮಂಡಲಿಯಲ್ಲಿ ದಿನನಿತ್ಯದ ಕೆಲಸ ಕಾರ್ಯಗಳು ಏನು ಇವೆಯೋ ಕಾನೂನು ಪ್ರಕಾರ ಆ ಕೆಲಸ ಕಾರ್ಯಗಳನ್ನು ಅವರು ನಡೆಸಬೇಕು. ನಿಮ್ಮ ಧ್ಯೇಯ ಧೋರಣೆಗಳು ಗುರಿ ಏನು ಇದೆಯೋ ಅದು ತಲುಪಬೇಕು. ಆದರ ಎಲ್ಲಾ ಕಾರ್ಯಕ್ರಮಗಳ ಮೇಲೂ ಮತ್ತು ಆದರ ಎಲ್ಲಾ ಚಲನವಲನಗಳ ಮೇಲೂ ನಿಗಾ ಇಟ್ಟು ಒಂದು ಹೆಜ್ಜೆ ಇಡಲು ಮುಂದೆ ಬಂದಿದ್ದೀರಾ. ಎದ್ದರೂ ತಪ್ಪು, ಕೂತರೂ ತಪ್ಪು ಎನ್ನುವ ಹಾಗೆ ರಾಜ್ಯ ಸರಕಾರದ ಯಾವ ಅನುಮತಿಯನ್ನೂ ಪಡೆಯದೆ ಅದು ಕೆಟ್ಟ ಪ್ರವೃತ್ತಿಯೇ ಆಗಲಿ, ಒಳ್ಳೆಯ ಪ್ರವೃತ್ತಿಯೇ ಆಗಲಿ ಆ ರೀತಿ ಮಾಡಬೇಕು ಎಂದರೆ ಇದು ರಾಜ್ಯ ಸರಕಾರಕ್ಕೆ ಮರ್ಯಾದೆ ತರುವಂಥ ವಿಷಯವಲ್ಲ. ಮತ್ತು ಈ ರೀತಿಯಾಗಿ ನೇರವಾದ ಹತೋಟಿ ಸರಕಾರಕ್ಕೆ ಇರತಕ್ಕಂಥಾದ್ದು ಪ್ರಜಾಪ್ರಭುತ್ವದ ಲಕ್ಷಣವಲ್ಲ. ನಾನು ನಿನ್ನೆ ದಿವಸ ಹೇಳಿದ್ದೇನೆ. ಇನ್ನು ಕ್ಲಾಸ್ ೮೭ (ಎ) ಸಬ್ ಸೆಕ್ಷನ್ (೨) ರಲ್ಲಿ ಈ ರೀತಿ ಹೇಳಿದ್ದೀರಾ :—

"The State Government may call for the records of any proceeding of the Board, the Housing Commissioner or any officer subordinate to the Board, for the purpose of satisfying itself as to the correctness, legality or propriety of such proceedings and may pass such order with respect thereto as it thinks fit" ಎಂದು ನಾನು ಇದನ್ನು ಓದುವುದಕ್ಕೆ ಕಾರಣ ಏನು ಎಂದರೆ ಇದರಲ್ಲಿ "call for the records of any proceedings of the Board, the Housing Commissioner" ಅಂತ ಇದೆ. ಆ ರೆಕಾರ್ಡನ್ನು ತರಿಸಲಿ ಮುಂದೆ "or any officer subordinate to the board" ಅಂತ ಇದೆ, ಅವರೂ ಇನ್ನು ನೋಡಲಿ. ಮುಂದೆ ಹೇಳುವುದಾದರೆ "correctness, legality or propriety of such proceedings and may pass such order with respect thereto as it thinks fit" ಅಂತ ಇದೆ. ಈ ರೀತಿ ಉದ್ರೇಕವಾದ ಪದಗಳು ಕ್ಲಾಸ್ ೮೭(ಎ) ಸಬ್ ಸೆಕ್ಷನ್ ೨ ರಲ್ಲಿ ಇದೆ. ಈ ಪದಗಳು ಸಂಪೂರ್ಣವಾಗಿ ಈಶ್ವರನ ಕೆಂಗಣ್ಣು ಮತ್ತು

ಹಣೆಗಣ್ಣು ಆಗಿ ಬಿಟ್ಟರೆ ಈ ಗೃಹ ಮಂಡಲಿಯಲ್ಲಿರತಕ್ಕ ಗೃಹದಾಖಲೆಗಳು ಮತ್ತು ಬೋರ್ಡಿನ ಭಾಷಣ ಗಳು, ಪತ್ರಗಳು ಭಸ್ಮವಾಗುತ್ತವೆ. You are questioning the very propriety of such proceedings. This according to me does not bring good name to the State Government. ಆದುದರಿಂದ ಇದರಲ್ಲಿ ಈ ರೀತಿ ಇರುವುದು ಒಳ್ಳೆಯದಲ್ಲ, ಮತ್ತು ಆದನ್ನು ನೀವು ತರತಕ್ಕಂಥಾದ್ದೂ ಅಲ್ಲ. ಮತ್ತು ಕೊನೆಯಲ್ಲಿ "may pass" ಅಂತ ಹೇಳಿ ದ್ದೀರಿ. ಒಂದು ವೇಳೆ ಆ ರೆಕಾರ್ಡನ್ನು ತರಿಸಿ ಮಾಡಿದ್ದು ತಪ್ಪು ಎಂದು ಸರ್ಕಾರ ಸಲಹೆಗಳು ಕೊಟ್ಟು ಆದನ್ನು ಮಾಡದೆ ಮಂಡಲಿ ತಿರ್ಮಾನಕ್ಕೆ ಬಿಟ್ಟಿದ್ದರೆ ಆದರ ಅಂತಿಮವಾದ ಶಿಫಾರಸ್ಸನ್ನು ಸರಕಾರ ತೆಗೆದುಕೊಳ್ಳಬೇಕು. ಈ ಬಗ್ಗೆ ರಾಜ್ಯ ಸರಕಾರದ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸಿದರೆ ನಾನು ಒಪ್ಪು ತ್ತೇನೆ. ಮತ್ತು ಕೊನೆಯಲ್ಲಿ "may pass such order with respect thereto as it thinks fit" ಅಂತ ಹೇಳಿದ್ದೀರಿ. ಈ ಬಗ್ಗೆ ಸಂಪೂರ್ಣವಾಗಿ, ಸ್ಪೇಚ್ಛೆಯಾಗಿ ವರ್ತನೆ ಮಾಡುವುದಕ್ಕೆ ರಾಜ್ಯ ಸರಕಾರವೇ ಇಟ್ಟುಕೊಳ್ಳುವುದಕ್ಕೆ ಸಾಧ್ಯ ಇದೆ. ಆದುದರಿಂದ ನನ್ನ ವಾದ ಏನೆಂದರೆ ಈ ಬಗ್ಗೆ ರಾಜ್ಯ ಸರಕಾರ ಆಡಿಯಿಂದ ಮುಡಿಯವರೆಗೂ ಸಂಪೂರ್ಣವಾದ ಹತೋಟಿಯನ್ನಿಟ್ಟುಕೊಳ್ಳುವುದಕ್ಕೆ ಈ ತಿದ್ದುಪಡಿ ಮಸೂದೆಯನ್ನು ತಂದಿದ್ದೀರೇ ಹೊರತು ನಿಜವಾಗಿಯೂ ಸಮಾಜವಾದದಲ್ಲಿ ನಂಬಿಕೆ ಇಟ್ಟು ಕೊಂಡಿರತಕ್ಕಂಥ ಶ್ರೀಮಾನ್ ಕೆ. ಎಚ್. ರಂಗನಾಥ ಅವರಿಗೆ ತಮ್ಮ ಅಮೃತಹಸ್ತದಿಂದ ಈ ಮಸೂದೆ ಯನ್ನು ಈ ಮನೆಯಲ್ಲಿ ಪಾಸು ಮಾಡಿ ದೇಶದಲ್ಲಿ ಜಾರಿಗೆ ಕೊಡುವಂತ ದುರುದ್ದೇಶ ಅವರಿಗೆ ಬಂತಲ್ಲಾ, ಆದರಲ್ಲೂ ಈ ಪ್ರಜಾಪ್ರಭುತ್ವದಲ್ಲಿ ಈ ರೀತಿ ಬಂತಲ್ಲಾ ಎಂದು ವಿಷಾದದಿಂದ ಹೇಳಬೇಕಾಗಿದೆ. ನಾನು ಸುಮಾರು ಅಲ್ಲಿರತಕ್ಕಂಥ ಎಲ್ಲ ಕಲಂಗಳನ್ನು ಪ್ರಸ್ತಾಪ ಮಾಡಿದ್ದೇನೆ. ಮುಂದೆ ಇದಕ್ಕೆ ಒಂದು ತಿದ್ದುಪಡಿ ಮಸೂದೆ ತಂದರೆ ನಾನು ಸಂತೋಷಪಡುತ್ತೇನೆ. ಈ ಬಗ್ಗೆ ನಾನು ಇನ್ನೊಂದು ಮಾತು ಹೇಳುತ್ತೇನೆ. ಈ ಒಂದು ಗೃಹ ಮಂಡಲಿ ಇರತಕ್ಕಂಥಾದ್ದು ರಾಜ್ಯದಲ್ಲಿ ಇರತಕ್ಕಂಥ ನಿರ್ಗತಿಕರು, ಬಡವರು, ಹರಿಜನ ಗಿರಿಜನರು ಇಂಥವರಿಗೆ ವಸತಿ ಸೌಕರ್ಯ ಮಾಡಿಕೊಡುವುದಕ್ಕೆ. ಈ ಗೃಹ ಮಂಡಲಿ ಒಂದುವೇಳೆ ಅವರಿಗೆ ವಸತಿ ಸೌಕರ್ಯವನ್ನು ಒದಗಿಸಿಕೊಡಲು ಅನ್ಯಾಯ ಮಾಡಿದ್ದರೆ ಶ್ರೀಮಾನ್ ಕೆ. ಎಚ್. ರಂಗನಾಥ್‌ರವರು ತಮ್ಮ ಸಾಮರ್ಥ್ಯವನ್ನು ಮಾಡಬೇಕಾಗಿತ್ತು. ಆ ಪ್ರದರ್ಶನ ಮಾಡಲಿಲ್ಲ. ಆದುದರಿಂದ ತಾವು ಇದರಲ್ಲಿ ವಿಫಲರಾಗಿದ್ದೀರಿ, ಕಾನೂನು ಪ್ರಕಾರ ಮತ್ತು ನಿಮ್ಮ ಗುರಿ ಏನು ಇದೆ ಆದರಲ್ಲಿ ವಿಫಲರಾಗಿದ್ದೀರಿ, ಈವೊತ್ತು ದೇಶದಲ್ಲಿರುವ ಎಲ್ಲ ಹಳ್ಳಿಗಳಲ್ಲಿ ಮತ್ತು ಪಟ್ಟಣಗಳಲ್ಲಿರುವ ಕೊಳಚೆ ಪ್ರದೇಶಗಳನ್ನು ಸೇರಿಸಿ ಕೊಂಡರೆ ನಿರುದ್ಯೋಗಿಗಳಾಗಿರುವ ಬಡವರು ಇದ್ದಾರೆ. ಅವರಿಗೆ ಮನೆಗಳನ್ನು ಕಟ್ಟಿಸಿ ಕೊಡುವುದಕ್ಕೆ ದೊಡ್ಡ ವ್ಯಾಪ್ತಿಯಲ್ಲಿರತಕ್ಕಂಥ ಯಾವ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಾ. ಇಂತಹ ಒಂದು ದೊಡ್ಡ ಯೋಜನೆಗೆ ಒಂದು ತಿದ್ದುಪಡಿ ಮಸೂದೆಯನ್ನು ತಂದು ನಿಜವಾಗಿಯೂ ಗೃಹ ಮಂಡಲಿ ಜೊತೆಗೆ ರಾಜ್ಯ ಸರಕಾರದವರು ಕೂಡ ದಾರಿದೀಪ ತೋರಿಸಿ ಕೊಟ್ಟಿದ್ದರೆ ನಾವು ಸಂತೋಷಪಡುತ್ತಿದ್ದೇವು. ಆವಾಗ It is a Board statutorily constituted ಮಾಡಬಹುದಾಗಿತ್ತು. ನಾನು ಮೊದಲೇ ಹೇಳಿದ ಹಾಗೆ ಆಡಿಯಿಂದ ಮುಡಿಯವರೆಗೂ ಈ ಗೃಹ ಮಂಡಲಿಯವರ ಕೆಲಸವನ್ನು ಪ್ರಶ್ನೆ ಮಾಡುತ್ತೀರೇ ವಿನಃ ಇನ್ನೇನೂ ಮಾಡುವುದಿಲ್ಲ. ಇದರ ಉದ್ದೇಶ ಅಧಿಕಾರವನ್ನು ಕಿತ್ತುಕೊಳ್ಳುವ ಸನ್ನಾಹ ನಡೆದಿದೆಯೇ ಹೊರತು ಇನ್ನಾವುದೂ ಇಲ್ಲ ಎಂದು ಹೇಳಲು ಬಯಸುತ್ತೇನೆ. ಆದುದರಿಂದ ಇಂತಹ ಒಂದು ತಿದ್ದುಪಡಿ ಮಸೂದೆಯನ್ನು ನಾನು ವಿರೋಧ ಮಾಡುತ್ತೇನೆ. ಶ್ರೀಮಾನ್ ಕೆ. ಎಚ್. ರಂಗನಾಥ್‌ರವರ ಸಮಾಜ ವಾದದ ಕಾರ್ಯಕ್ರಮವೇನೂ ಇದರಲ್ಲಿ ಕಾಣಿಸಿಲ್ಲ. ಈ ಮಂಡಲಿಯನ್ನು ಈ ರೀತಿ ಇಬ್ಬರು ಹಂಚಿಕೊಂಡಿ ದ್ದಾರೆ. He becomes a very nominal Head ಅಂದರೆ ಚೇರ್ಮನ್ನೇ ಬೇರೆ, ನಾಮಿನಲ್ ಹೆಡ್ಡೇ ಬೇರೆ ಆಯಿತು. ಹಾಗಾದರೆ ಅಲ್ಲಿರತಕ್ಕಂಥ ಚೇರ್ಮನ್ ಏತಕ್ಕೆ ಬೇಕು ಎಂದರೆ ಅಲ್ಲಿರುವ ಚೇರಿಗೆ ಒಬ್ಬ ಮೆನ್ ಬೇಕಾಗಿದೆ. ಆದುದರಿಂದ ಮಾನ್ಯ ಕೆ. ಎಚ್. ರಂಗನಾಥರವರಿಗೆ ಹೇಳುತ್ತೇನೆ ಈ ಚೇರನ್ನು ನೀವೇ ಇಟ್ಟುಕೊಳ್ಳಿ. ಮೆನ್ ಅನ್ನು ಮನೆಗೆ ಕಳುಹಿಸಿಬಿಡಿ.

ಶ್ರೀ ಎಚ್. ಡಿ. ದೇವೇಗೌಡ :—ಅದಕ್ಕೂ ಕಾಂಪಿಟಿಷನ್ ಇದೆ.

Sri S. BANGAREPPA :—You are in queue, I know it. ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿಯನ್ನು ತಂದಿರತಕ್ಕಂಥ ಉದ್ದೇಶ ಸಂಪೂರ್ಣವಾಗಿ ಚೇರ್ಮನ್‌ಗೆ ಇರತಕ್ಕಂಥ ಅಧಿಕಾರವನ್ನು ಕಿತ್ತು ಹಾಕುವುದು ಮತ್ತು ಮಂಡಲಿಗೆ ಸದಸ್ಯರನ್ನು ಭರ್ತಿ ಮಾಡುವ ಅಧಿಕಾರ ಬೇಕಾ ವಾಗ ಇಡುವುದು ಬೇಡದೇ ಇದ್ದಾಗ ಕಿತ್ತುಹಾಕುವುದು. ಈ ರೀತಿಯಾದಂಥ ರಾಜ್ಯ ಸರಕಾರದ ವರ್ತನೆ ಪ್ರಶ್ನಾತೀತವಾದುದಲ್ಲ. ನ್ಯಾಯಾಲಯದಲ್ಲಿ ಈಗಾಗಲೇ ತಮ್ಮ ಬಗ್ಗೆ ಅಂತಿಮ ತೀರ್ಪು ಸಿಕ್ಕದೇ ಇದ್ದರೂ ಕೂಡ ಪ್ರಾರಂಭದಲ್ಲೇ ಸರಕಾರದ ಬಗ್ಗೆ ನ್ಯಾಯಾಲಯ ಏನು ತೀರ್ಪು ಕೊಟ್ಟಿದೆ ಎನ್ನುವುದರ ಬಗ್ಗೆ ನಾನು ಹೆಚ್ಚು ವ್ಯಾಖ್ಯಾನ ಮಾಡುವುದಿಲ್ಲ. ಇನ್ನು ಅನೇಕರು ಆ ಬೆಳಕನ್ನು ಹಿಡಿದು ಚಿಲ್ಲಬೇಕು.

ಆದುದರಿಂದ ಇಂತಹ ಒಂದು ಮಸೂದೆಯನ್ನು ಸರಕಾರ ತರುವುದು ಒಳ್ಳೆಯದಲ್ಲ ಎಂದು ಹೇಳಿ ಮಾನ್ಯ ಶ್ರೀ ಕೆ. ಎಚ್. ರಂಗನಾಥ್‌ರವರು ಈ ಮಸೂದೆಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಏನೋ ಒಂದು ಉದ್ದೇಶ ಮಾಡಿರತಕ್ಕಂಥ ಈ ಕೆಟ್ಟ ಪ್ರವೃತ್ತಿಗೆ ಈ ಒಂದು ತಿದ್ದುಪಡಿ ತಂದು ಮಾನ್ಯ ಕೆ. ಎಚ್. ರಂಗನಾಥ್‌ರವರು ಒಂದು ಕಿರೀಟ ಧಾರಣಾ ಮಹತೋತ್ಸವವನ್ನು ಆಚರಿಸಿಕೊಳ್ಳುವುದು ಬೇಡ. ಆದುದರಿಂದ ಈ ತಿದ್ದುಪಡಿ ಮಸೂದೆಯನ್ನು ವಾಪಸ್ ತೆಗೆದುಕೊಳ್ಳಬೇಕು ಎಂದು ಮತ್ತೊಮ್ಮೆ ಹೇಳಿ ನಾನು ಈ ಮಸೂದೆಯನ್ನು ಸಂಪೂರ್ಣವಾಗಿ ವಿರೋಧಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ :—ಮಾನ್ಯ ಅಧ್ಯಕ್ಷರೆ, ನನಗೆ ಈ ಗೃಹನಿರ್ಮಾಣ ಮಂಡಲಿಯ ತಿದ್ದುಪಡಿ ಮಸೂದೆಯ ಮೇಲೆ ಮಾತನಾಡತಕ್ಕ ಸಂದರ್ಭದಲ್ಲಿ ಒಂದು ಏನು ಅನಿಸುತ್ತಿದೆ ಎಂದರೆ ಈ ಹಿಂದೆ ಯಾರು ಯಾರೋ ಈ ಗೃಹನಿರ್ಮಾಣ ಸಂಸ್ಥೆ, ವಾಟರ್ ಬೋರ್ಡ್ ಮತ್ತು ರೋಡ್ ಟ್ರಾನ್ಸ್‌ಪೋರ್ಟ್ ಸರ್ವೀಸ್ ಈ ಸಂಸ್ಥೆಗಳಲ್ಲಿ ಏನೇನೋ ಮಾಡಿದ್ದರ್ಕಾಗಿ ಈಗ ಅವುಗಳ ಬಗ್ಗೆ ಭಾರಿಯಾಗಿ ಆದಕ್ಕೆ ಉತ್ತರ ಕೊಡಬೇಕಾದಂಥ ಒಂದು ಪ್ರಸಂಗ ಮಾನ್ಯ ರಂಗನಾಥ್ ಅವರ ಪಾಲಿಗೆ ಬಂದುದು ನನಗೆ ಪೂರಾ ವ್ಯಥೆಯನ್ನು ಉಂಟುಮಾಡಿದೆ. ಯಾರೋ ಮಾಡಿದ ಲೋಪದೋಷಗಳಿಗೆ ಇವರು ತಲೆ ಕೊಡಬೇಕಾಗಿ ಬಂದಿದೆ. ಮಾನ್ಯ ಬಸವಲಿಂಗಪ್ಪನವರು ತಮ್ಮದೇ ಆದಂಥ ಒಂದು ದೊಡ್ಡ ವೈಶಿಷ್ಟ್ಯದ ಮೇಲೆ ಇಲ್ಲಿ ಕೆಲಸಕಾರ್ಯಗಳಾಗಬೇಕೆಂಬ ಒಂದು ನಿಲುವಿನ ಮೇಲೆ ಅವರು ಮೊದಲು ಈ ಬಿಲ್ಲನ್ನು ತಯಾರಿಸಿದರು. ಆದರೆ ಇಂಥ ಹಿತವಿಲ್ಲದ ಕಾರ್ಯಗಳನ್ನು ಮಾನ್ಯ ರಂಗನಾಥ್ ಅವರು ಯಾರದೋ ಬಲಂತಕ್ಕಾಗಿ ಒಪ್ಪಿಕೊಂಡಂತೆ ಕಾಣುತ್ತಿದೆ.

ಈ ಬೋರ್ಡನ್ನು ಸೃಷ್ಟಿ ಮಾಡಿದ್ದು ಮುಖ್ಯವಾಗಿ ಎರಡು ಕಾರಣಗಳಿಗಾಗಿ. ಶಾಸನ ಸಭೆಗಳಿಗೆ ಇಲ್ಲವೇ ಪಾರ್ಲಿಯಮೆಂಟಿಗೆ ನಡೆಯತಕ್ಕ ಚುನಾವಣೆಗಳಲ್ಲಿ ಸೋಲತಕ್ಕ ಪುಡಾರಿಗಳಿಗೆ ಜಾಗ ಕೊಡಬೇಕು ಅನ್ನುವುದು ಒಂದು ಕಾರಣ. ಇಂಥ ಉದ್ದೇಶಗಳಿಗಾಗೇ ಇಂಥ ಅನೇಕ ಬೋರ್ಡುಗಳೂ ಮತ್ತು ಕಾರ್ಪೋರೇಷನ್ನುಗಳೂ ಹುಟ್ಟಿಕೊಂಡಿವೆ. ಆ ಖಾದಿ ಬೋರ್ಡ್ ಮತ್ತು ಸಿಟಿ ಇಂಪ್ರೂವ್‌ಮೆಂಟ್ ಬೋರ್ಡ್ ಇತ್ಯಾದ್ಯಾದಿಗಳೆಲ್ಲಾ ಇರುವುದು ಇದಕ್ಕಾಗಿಯೇ. ಆದರೆ ಒಂದು ವಿಚಾರ, ನಾನು ಸುಮಾರು ಕಳೆದ ೪೫ ವರ್ಷಗಳಿಂದಲೂ ಖಾದಿಯನ್ನು ಹಾಕುತ್ತಿದ್ದೇನೆ. ಆದರೆ ಎಂದೂ ಖಾದಿಯ ಮುಖವನ್ನೂ ಕೂಡ ಕಾಣದವರು ಈ ದಿವಸ ಕಾಂಗ್ರೆಸ್ ಸಂಸ್ಥೆಯಲ್ಲಿ ಸದಸ್ಯರಾಗಿದ್ದಾರೆ. ಎಂದೂ ಕಾಂಗ್ರೆಸಿನಲ್ಲಿ ಸೇರದೆ ಇದ್ದವರೂ ಈ ದಿವಸ ದೊಡ್ಡ ಕಾಂಗ್ರೆಸ್ ಸದಸ್ಯರು.....

ಒಬ್ಬ ಮಾನ್ಯ ಸದಸ್ಯರು :—ಕಾಂಗ್ರೆಸ್ಸಿಗೂ, ಖಾದಿಗೂ ಮತ್ತು ಗಾಂಧಿಗೂ ಮತ್ತು ಇಂದಿರಾ ಗಾಂಧಿಗೂ ಯಾವ ಸಂಬಂಧವೂ ಇಲ್ಲ.

ಶ್ರೀ ಟಿ. ಆರ್. ಶಾಮಣ್ಣ :—ಸರ್ಕಾರದವರು ಈ ಬೋಡನ್ನು ತಮ್ಮ ಸ್ವಾರ್ಥಕ್ಕಾಗಿ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆಂಬುದು ನನ್ನ ಮೊದಲನೇ ಆಪಾದನೆ. ಸಿಟಿ ಇಂಪ್ರೂವಮೆಂಟ್ ಸಂಸ್ಥೆ ಸಾರ್ವಜನಿಕ ಸಂಸ್ಥೆ ಹಾಗಿದ್ದಾಗ ಆದಕ್ಕೆ ಸಂಬಂಧಪಟ್ಟ ೭೫ ಲಕ್ಷ ರೂಪಾಯಿಗಳನ್ನು ಸರ್ಕಾರದವರು ತಮ್ಮ ನೌಕರ ವರ್ಗದವರಿಗೆ ಸಂಬಳ ಕೊಡುವುದಕ್ಕಾಗಿ ಹೇಗೆ ಉಪಯೋಗ ಮಾಡಿದರು ? ಸಾಲವಾಗಿ ಆದರೂ ಅದನ್ನು ತೆಗೆದುಕೊಳ್ಳುವುದಕ್ಕೆ ಇವರಿಗೇನು ಹಕ್ಕಿದೆ ? ಹೀಗೆ ಇನ್ನೂ ಅನೇಕ ಸಾರ್ವಜನಿಕ ಸಂಸ್ಥೆಗಳಿಂದ ಸರ್ಕಾರದವರು ಹಣವನ್ನು ತಮ್ಮ ಖರ್ಚಿಗಾಗಿ ಬಳಿಸಿದ್ದಾರೆ. ಈ ಸ್ವಾಯತ್ತ ಸಂಸ್ಥೆ ಹಣವನ್ನು ಸರ್ಕಾರದವರು ತಮ್ಮ ಸ್ವಂತ ಆಸ್ತಿಯಂತೆ ಬಳಿಸಿದ್ದಾರೆ. ಇದು ಖಂಡನೀಯವಾದದ್ದು. ಒಂದು ಸಾರಿ ಸರ್ಕಾರದವರು ಇದು ಸ್ವಾಚ್ಛುಟಿರಿಬಾಡಿ ಆದಕ್ಕೇನೂ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತ, ಇನ್ನೊಂದು ದಿಕ್ಕಿನಲ್ಲಿ ಈ ಸಂಸ್ಥೆಗಳನ್ನು ತಮ್ಮ ಕೈಗೊಂಬೆಗಳನ್ನಾಗಿ ಮಾಡಿಕೊಳ್ಳುವುದಕ್ಕೆ ಈ ಆಟಗಳನ್ನು ನಡೆಸುತ್ತಿದ್ದಾರೆ. ಇಂಥ ಸಂಸ್ಥೆಗಳಲ್ಲಿ ಸ್ವಾತಂತ್ರ್ಯವಾಗಿ ನಿರ್ಭಿತಿಯಿಂದ ನಿರ್ದಾಕ್ಷಿಣ್ಯವಾಗಿ ಕೆಲಸ ಮಾಡತಕ್ಕ ವ್ಯಕ್ತಿಗಳನ್ನು ತೆಗೆದುಹಾಕಿ ಅಲ್ಲಿ ತಮ್ಮ ಕೈಗೊಂಬೆಗಳಾಗಿ ಕುಣಿಯತಕ್ಕ ಜನರನ್ನು ಇಂಥ ಸಂಸ್ಥೆಗಳಲ್ಲಿ ಇಡಬೇಕೆಂಬ ಉದ್ದೇಶ ಕೂಡ ಇದರಲ್ಲಿ ಅಡಕವಾಗಿದೆ. ಇಂಥ ಬೋರ್ಡುಗಳಿಂದ ಸಾರ್ವಜನಿಕರಿಗೆ ಆಗತಕ್ಕ ಉಪಕಾರಕ್ಕಿಂತ ಅಪಕಾರವೇ ಜಾಸ್ತಿ. ಈ ಮಸೂದೆಯಲ್ಲಿ ಏತಕ್ಕೆ ಇದರ ಸದಸ್ಯರನ್ನು ೧೨ ರಿಂದ ೧೫ ಕ್ಕೆ ಏರಿಸುತ್ತಿದ್ದೀರೆಂಬುದಕ್ಕೆ ಸರಿಯಾದ ಜವಾಬ್ ಇಲ್ಲ. ಅಲ್ಲದೆ ಇನ್ನೊಂದು ಇದರಲ್ಲಿ ವಿಶೇಷ ಎನೆಂದರೆ ಸರ್ಕಾರದವರ ಅಭಯ ಹಸ್ತ ಇರುವತನಕ ಇಲ್ಲಿ ಸದಸ್ಯರಾಗಲಿ, ಅಧ್ಯಕ್ಷರಾಗಲಿ ಇರಲು ಸಾಧ್ಯ. ಅವರ ಅನುಗ್ರಹ ಮುಗಿದರೆ ಅವರು ಅಲ್ಲಿ ಇರುವಂತಿಲ್ಲ. ಮೊನ್ನೆ ಒಂದು ಕಡೆ ಗೃಹ ಮಂತ್ರಿಗಳು ಏನು ಹೇಳಿದ್ದಾರೆಂದರೆ ಅದು ಕೇಂದ್ರ ಸರ್ಕಾರದ ಗೃಹ ಮಂತ್ರಿಗಳು. ದೇಶದಲ್ಲಿ ಅನೇಕ ಈ ದೊಂಬಿ ಗಲಾಟೆ ಇತ್ಯಾದಿಗಳೇನು ನಡೆಯುತ್ತಿವೆ ಇದಕ್ಕೆ ಮೂಲ ಕಾರಣ ಈ ಪ್ರಜಾ

ಪ್ರಭುತ್ವದಲ್ಲಿ ವಿಶ್ವಾಸವಿಲ್ಲದ ಈ ವಿರೋಧ ಪಕ್ಷಗಳೇನಿವೆ ಅವು ಜನರನ್ನು ಹತ್ತಿಕ್ಕುತ್ತಿವೆ ಅದರಿಂದ ದೇಶದಲ್ಲಿ ಈ ದೊಂಬಿ ಗಲಾಟೆಗಳು ನಡೆಯುತ್ತಿವೆ ಎಂದು ಹೇಳುತ್ತಿರುವ ಪಕ್ಷದವರೇ ಈ ದಿವಸ ಇಲ್ಲಿ ಪ್ರಜಾಪ್ರಭುತ್ವಕ್ಕೆ ತಿಲಾಂಜಲಿಯನ್ನಿತ್ತಿದ್ದಾರೆ. ಈ ಮಸೂದೆಯಲ್ಲಿ ರಿಟ್ರಾಸ್ಪೆಕ್ಟೀವಾಗಿ ಕೆಲವು ಕಲಂಗಳು ಜಾರಿಗೆ ಬರಬೇಕೆಂದು ಹೇಳಿದ್ದಾರೆ. ಆದರೆ ಹಿಂದೆ ನಡೆದು ಹೋಗಿರತಕ್ಕ ವ್ಯತ್ಯಾಸಗಳನ್ನು ಈಗ ಸರಿಪಡಿಸುವುದು ಹೇಗೆ ? ಆದುದರಿಂದ ಇದನ್ನು ರಿಟ್ರಾಸ್ಪೆಕ್ಟೀವಾಗಿ ಮಾಡುವುದಕ್ಕಾಗುವುದಿಲ್ಲ. ಇವರಿಗೆ ಮನಸ್ಸು ಬಂದಲ್ಲಿ ರಿಟ್ರಾಸ್ಪೆಕ್ಟೀವ್, ಬಾರದಿದ್ದ ಕಡೆಗಳಲ್ಲೆಲ್ಲಾ ಪ್ರಾಸ್ಪೆಕ್ಟೀವ್ ಎಂದು ಹೇಳತಕ್ಕ ವಾದ ಅಷ್ಟು ನ್ಯಾಯವಾದ್ದಲ್ಲ. ಯಾರು ಮಾರ್ಚಿ ತಿಂಗಳ ಹಿಂದೆ ಸಾಲಕ್ಕೆ ಅರ್ಜಿ ಹಾಕಿದ್ದರು ಅವರಿಗೆ ಮಾತ್ರ ಸಾಲ ಕೊಡಬೇಕೆಂದಿದ್ದಾಗ ಈಗ ಅದನ್ನು ಜೂನ್ ತಿಂಗಳಿಗೆ ಹಿಂದೆ ಎಂದು ಮಾಡಿದರೆ ಎಲ್ಲರಿಗೂ ಕೊಡುವಷ್ಟು ಹಣ ಅಲ್ಲಿದೆಯೇ ? ಹೀಗೆಲ್ಲಾ ನಡೆಸುವುದು ನಮ್ಮ ಪ್ರಜಾಪ್ರಭುತ್ವಕ್ಕೆ ಅನುಗುಣವಾಗಿಲ್ಲವೆಂದು ಹೇಳದೆ ವಿಧಿಯಿಲ್ಲ.

ಆ ಮೇಲೆ ೩ನೆಯ ಕ್ಲಾಜಿನಲ್ಲಿ ಇರುವ ತಿದ್ದುಪಡಿಯಂತೆ ೧೨ ಜನರಿಗೆ ಬದಲಾಗಿ ೧೫ ಮಂದಿ ಸದಸ್ಯರಿರಬೇಕು ಎಂದಿದೆ. ೧೫ ಕ್ಕೆ ಏರಿಸಲು ಕಾರಣವನ್ನು ಒತ್ತಾಯವಾಗಿ ಕೇಳಿದ ಮೇಲೆ ಮಸೂದೆಯನ್ನು ಮಂಡಿಸಿದ ಶ್ರೀ ರಾಚಯ್ಯನವರಿಗೆ ಸರಿಯಾದ ಉತ್ತರ ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ೧೨ ಸದಸ್ಯರಿರುವುದರಿಂದ ತೊಂದರೆಯೇನು, ೧೫ ಜನರಿದ್ದರೆ ಅನುಕೂಲವೇನು ಎಂಬ ವಿವರವನ್ನು ಸಕಾರಣವಾಗಿ ಕೊಡದಿರುವುದು ಮೆಚ್ಚುವ ವಿಚಾರವಲ್ಲ. ಈಗ ಬೋರ್ಡ್ ದೊಡ್ಡದು ಮಾಡುವ ಅವಶ್ಯಕತೆಯೇನಿತ್ತು ? ಈಗ ಬೋರ್ಡ್ ದೊಡ್ಡದು ಮಾಡಿದರೆ ಸರಕಾರ ತನ್ನ ಪಕ್ಷದವರಿಗೆ ಅಲ್ಲಿ ಹೆಚ್ಚು ಅವಕಾಶ ಮಾಡಿ ಕೊಡಬಹುದು, ಅಷ್ಟೇ. ಅದು ಹೊರತು ಬೋರ್ಡಿನ ಕೆಲಸ ಚೆನ್ನಾಗಿ ನಡೆಯುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ನಾನು ವಾಟರ್ ಸಪ್ಲೈ ಅಂಡ್ ಸ್ಯುಯರೇಜ್ ಬೋರ್ಡು ಮುಂತಾದ ಅನೇಕ ಬೋರ್ಡುಗಳ ವಿಚಾರದಲ್ಲಿ ಆರೋಪ ಮಾಡಿದ್ದೆ, ಒಂದು ನೀತಿ ನಿಯಮ ಇಟ್ಟುಕೊಂಡು ನೀರು ಸರಬರಾಯಿ ಬೋರ್ಡನ್ನು ರಚನೆ ಮಾಡಿದ್ದಾರೆ. ಈ ಬೋರ್ಡು ಆದಾಗಿನಿಂದ ಶ್ರೀ ಬಸವಲಿಂಗಪ್ಪನವರು ಅದಕ್ಕೆ ಮಂತ್ರಿಗಳಾಗಿದ್ದರೂ ಕೂಡ ಒಂದು ಮುಖ್ಯವಾದ ಅಂಶವನ್ನು ಗಮನದಲ್ಲಿ ಇಟ್ಟುಕೊಂಡು ಯಾರು ಅರ್ಹರೋ ಅವರನ್ನು ಚುನಾಯಿಸಲು ಅವರು ಅವಕಾಶ ಕಲ್ಪಿಸಿದ್ದಾರೆ. ಹೆಚ್ಚು ಸಂಖ್ಯೆಯ ಸದಸ್ಯರಿದ್ದರೆ ತ್ವರಿತವಾಗಿ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲ, ಮತ್ತು ಅನೇಕ ರೀತಿಯ ಪ್ರಭಾವ ಬಂದು ರಾಜಕೀಯ ಬಂದು ಕೆಲಸ ಸುಸೂತ್ರವಾಗಿ ಆಗುವುದಿಲ್ಲ. ಆದುದರಿಂದ ೧೫ ಜನರಿರುವ ಬೋರ್ಡು ನಿಜವಾಗಿಯೂ ಒಳ್ಳೆಯ ಕೆಲಸ ಮಾಡುವುದಕ್ಕಾಗುವುದಿಲ್ಲ. ಭೀರ್ಮನ್ನರ ನೇಮಕ ಮಾಡುವಾಗ ಸ್ವಲ್ಪ ಔಚಿತ್ಯವಿರಬೇಕು, ಹಿಂದಿದ್ದ ಬೋರ್ಡುಗಳಲ್ಲಿ ಹೆಸರಾಂತ ಚೀಫ್ ಎಂಜನಿಯರುಗಳಿದ್ದರು ಮೈಸೂರು ಬ್ಯಾಂಕಿನ ಮ್ಯಾನೇಜರಾಗಿದ್ದ ಶ್ರೀ ಬಿ. ವಿ. ನಾರಾಯಣರೆಡ್ಡಿ ಮತ್ತು ಶ್ರೀ ಕೃಷ್ಣಮೂರ್ತಿ ಮುಂತಾದವರಿದ್ದರು. ಶ್ರೀ ಟಿ. ಕೃಷ್ಣರಾಯರಿದ್ದರು, ಶ್ರೀ ಯತಿರಾಜಲು ನಾಯ್ಡುರವರಿದ್ದರು. ಇಂಥ ಯೋಗ್ಯರು ಇದ್ದುದರಿಂದ ಆಡಳಿತ ಚೆನ್ನಾಗಿ ನಡೆಯಲು ಅವಕಾಶವಿತ್ತು. ಆದರೆ ಈಗ ಸೃಷ್ಟಿಯಾಗುತ್ತಿರುವ ಬೋರ್ಡುಗಳಲ್ಲಿ ಒಂದೇ ಪಕ್ಷಕ್ಕೆ ಸೇರಿದವರು, ಆಡಳಿತ ಪಕ್ಷದ ಹಿಂಬಾಲಕರು ಮತ್ತು ಅವರ ಹಿಂದುಗಡೆಯಿದ್ದು ಚುನಾವಣೆ ಇಲ್ಲದೆ ಬರುವವರು ಇದ್ದರೆ ನಾಗರಿಕರ ಹಿತದೃಷ್ಟಿ ಎಷ್ಟು ಸಾಧನೆಯಾಗಬಹುದು ಎಂದು ಯೋಚನೆಮಾಡಬೇಕು. ಆದುದರಿಂದ ಬೋರ್ಡಿನ ಸದಸ್ಯರ ಸಂಖ್ಯೆಯನ್ನು ೧೫ ಕ್ಕೆ ಹೆಚ್ಚಿಸುವಾಗ ೩ ಜನರನ್ನು ಹೆಚ್ಚಾಗಿ ತೆಗೆದುಕೊಳ್ಳುವಾಗ ಯೋಗ್ಯರಾದವರನ್ನು ಆರಿಸಲು ಒಂದು ನಿಯಮ ಇಟ್ಟುಕೊಳ್ಳಿ. ಇದರ ಬಗ್ಗೆ ನಾನು ತಿದ್ದುಪಡಿ ಕಳಿಸಿದ್ದೇನೆ, ಅದು ಬಂದಾಗ ಅವರ ವಿಚಾರ ತಿಳಿಸುತ್ತೇನೆ. ಯಾವುದಾದರೂ ಒಂದು ನೀತಿ ನಿಯಮ ಇಟ್ಟುಕೊಂಡು ನಾಗರಿಕರ ಹಿತದೃಷ್ಟಿಯಿಂದ ಕೆಲಸವಾಗುವ ರೀತಿಯಲ್ಲಿ ಸರಿಯಾದ ಸದಸ್ಯರನ್ನು ಚುನಾಯಿಸಿ. ವಿರೋಧ ಪಕ್ಷದವರನ್ನೇ ಹಾಕಬೇಕೆಂದು ನಾನು ಹೇಳುವುದಿಲ್ಲ. ಶುದ್ಧ ಚಾರಿತ್ರ್ಯ ಇರುವವರನ್ನು, ನಾಗರಿಕರ ಹಿತ ಬಯಸುವವರನ್ನು, ಚೆನ್ನಾಗಿ ಕೆಲಸಮಾಡಲು ಅರ್ಹತೆ ಇರುವವರನ್ನು ಹಾಕಬೇಕೇ ಹೊರತು ಆಡಳಿತ ಪಕ್ಷದ ಪ್ರಡಾರಿಗಳನ್ನು ಮತ್ತು ಹಿಂಬಾಲಕರನ್ನು ಹಾಕುವುದಕ್ಕೆ ಪ್ರಯತ್ನಪಡಬಾರದು ಅಂಥವರಿಗೆ ಖಂಡಿತ ಅಧಿಕಾರ ಕೊಡಕೂಡದು ಎಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಈಗ ರಚಿಸಿರುವ ಬೋರ್ಡಿನಲ್ಲಿ ಆಡಳಿತ ಪಕ್ಷದವರನ್ನೇ ತುಂಬಿದ್ದಾರೆ, ಬೇರೆ ಅರ್ಹರಿದ್ದರೂ ಅವರನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವೇ ಇಲ್ಲ. ಆದುದರಿಂದ ೧೫ ಜನರ ಅವಶ್ಯಕತೆಯಿಲ್ಲ, ಮೂರು ಜನರನ್ನು ಹೆಚ್ಚು ಮಾಡಲು ಸಕಾರಣ ಕೊಡಬೇಕು, ಜೊತೆಗೆ ಆಡಳಿತ ಪಕ್ಷದವರನ್ನು ದೂರ ಇಡಬೇಕು. ಒಳ್ಳೆಯವರಿಗೆ ಅವಕಾಶವಿಲ್ಲ, ಈಗ ತೆಗೆದು ಕೊಂಡಿರುವವರು ಎಂಥವರು ಎಂದು ನನಗೆ ಪರಿಶ್ರಮವಿದೆ, ಈಗ ಅದನ್ನು ಹೇಳುವುದಿಲ್ಲ.

ಎಲ್ಲಕ್ಕಿಂತ ಮುಖ್ಯವಾಗಿ ಇಲ್ಲಿ ತಂದಿರುವ ತಿದ್ದುಪಡಿ ಮಸೂದೆಯಲ್ಲಿ ಪ್ರಜಾಪ್ರಭುತ್ವಕ್ಕೆ ತಿಲಾಂಜಲಿ ಕೊಡುವಂತೆ ಎಲ್ಲಾ ಸೆಕ್ಷನ್ನುಗಳೂ ಇವೆ. ಯಾವಾಗಲೂ ಪ್ರಜಾಪ್ರಭುತ್ವವನ್ನು ಉಳಿಸಬೇಕು, ಬೆಳೆಸ

ಬೇಕು ಎಂದು ಹೇಳುತ್ತಿದ್ದರೂ ಕಾರ್ಯಗತ ಮಾಡುವಾಗ ಪ್ರತಿಯೊಂದರಲ್ಲೂ ಅಕ್ರಮ ನಡೆಯುತ್ತಿರುವುದು ಶೋಚನೀಯವಾದ ವಿಚಾರ.

ಆಮೇಲೆ ೪ ನೆಯ ಕ್ಲಾಜಿನಲ್ಲಿರುವ ವಿಷಯ ನೋಡಿದರೆ ಟಮ್ಸ್ ಆಫ್ ಆಫೀಸ್ ಮತ್ತು ಕಂಡೀಷನ್ಸ್ ಆಫ್ ಸರ್ವಿಸ್ ನೋಡಿದರೆ ಇದು ಪ್ರಜಾಪ್ರಭುತ್ವಕ್ಕೆ ಗೌರವ ತರುವುದೇ ಎನಿಸುವುದು. ಯಾರಾದರೂ ಗೌರವವಿರುವವರು ಇಂಥ ಒಂದು ನಿಬಂಧನೆಯ ಮೇಲೆ ಇದಕ್ಕೆ ಸದಸ್ಯರಾಗಲು ಒಪ್ಪುವರೇ ? ಮಾನ ಮರ್ಯಾದೆ ಇರುವವರು ಯಾರೂ ಒಪ್ಪುವುದಿಲ್ಲ. ಇದರಿಂದ ಬರುವ ವರ ಮಾನ, ಅಧಿಕಾರ ಮುಂತಾದವುಗಳಿಗೆ ಆಸೆ ಪಡುವವರು ಹೋಗಿ ಇದರಲ್ಲಿ ಸದಸ್ಯರಾಗಬಹುದೇ ಹೊರತು ಮರ್ಯಾದೇಯಿಂದ ನೀತಿನಿಯಮಗಳಿಗನುಗುಣವಾಗಿ ನ್ಯಾಯವಾಗಿ ಕೆಲಸ ಮಾಡಬೇಂದಿರುವವರು ಇಂಥ ಕಲಂಕಗಳಿರುವ ಬೋರ್ಡಿನಲ್ಲಿ ಸದಸ್ಯರಾಗಲು ಖಂಡಿತ ಒಪ್ಪುವುದಿಲ್ಲ. ಈ ಕಲಮು ಪ್ರಜಾಪ್ರಭುತ್ವಕ್ಕನುಗುಣವಾಗಿಲ್ಲ. ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವವರು ಇದಕ್ಕೆ ಬೆಂಬಲ ಕೊಡಲು ಸಾಧ್ಯವಿಲ್ಲ. ಇದರಿಂದ ಧರ್ಮರಾಯನ ಕೈಲಿ ಏನೋ ಹೇಳಿಸಿದಂತಾಗುವುದು. ಇದಕ್ಕೆ ಒಪ್ಪಬಾರದು. ಶ್ರೀ ಬಸವಲಿಂಗಪ್ಪನವರು ಒಂದು ಗುರಿ ಇಟ್ಟುಕೊಂಡು ಕೆಲಸಮಾಡುತ್ತಿದ್ದರು.

ಈಗ ನಾನು ತಮಗೆ ಒತ್ತಾಯಪೂರ್ವಕವಾಗಿ ಹೇಳತಕ್ಕದ್ದು ಇಷ್ಟೆ. ಅಕ್ರಮ ಮಾಡುತ್ತಾ ಇದ್ದರೆ ಉಳಿಸಿಕೊಳ್ಳಬೇಕೇ ಎಂದು ಪ್ರಶ್ನೆ ಕೇಳಬಹುದು. ಒಂದು ಕೆಲಸದಿಂದ ತೆಗೆದುಹಾಕುವ ಪಕ್ಷದಲ್ಲಿ ಷೋಕಾಸ್ ನೋಟೀಸ್ ಕೊಡಬೇಕು. ಇಂತಹ ಅಕ್ರಮ ಮಾಡಿದ್ದಾನೆ ತೆಗೆಯುತ್ತೇವೆ ಎಂದರೆ ಅಡ್ಡಿ ಇಲ್ಲ. ನಿಯಮಾವಳಿ ಬಿಟ್ಟು ಹೌಸಿಂಗ್ ಬೋರ್ಡ ದೃಷ್ಟಿಯಿಂದ. ನಾಗರೀಕರ ದೃಷ್ಟಿಯಿಂದ ಅಕ್ರಮ ನಡೆಸುತ್ತಾ ಇದ್ದರೆ ಅಂಥವರನ್ನು ಕಿತ್ತುಹಾಕಿ, ಅಲ್ಲೇ ಇಡಿ ಎಂದು ಹೇಳುವುದಿಲ್ಲ. ಈಗ ಮಾಡುತ್ತ ಇರುವುದರಲ್ಲಿ ನಿಯಮವಿಲ್ಲ, ನೀತಿ ಇಲ್ಲ, ಕ್ರಮ ಇಲ್ಲ. A blank cheque is given to the Government *viz.*, that the Chairman and other members shall hold office during the pleasure of the State Government. ಈ ರೀತಿ ಮಾಡುವುದು ನ್ಯಾಯವೇ ಎಂದು ಕೇಳಬೇಕಾಗುತ್ತದೆ. ಇದಕ್ಕೆ ಸರಿಯಾದಂಥ ಉತ್ತರ ಕೊಡದೇ ಹೋದ ಪಕ್ಷದಲ್ಲಿ ತಮ್ಮನ್ನೂ ಕೂಡ ಧರ್ಮರಾಯನ ಲಿಸ್ಟಿಗೆ ಸೇರಿಸಬೇಕಾಗುತ್ತದೆ. ನಿನ್ನೆ ದಿವಸ ರೇಡಿಯೋನಲ್ಲಿ ಪಾರ್ಲಿಮೆಂಟ್ ಪ್ರೋಗ್ರಾಮನ್ನು ಕೇಳುತ್ತಿದ್ದೆ. ಗೃಹಸಚಿವರು ದೊಡ್ಡ ಭಾಷಣ ಮಾಡಿದರು. ಪ್ರಜಾಪ್ರಭುತ್ವಕ್ಕೆ ಧಕ್ಕೆ ತರುವುದಕ್ಕೆ ವಿರೋಧಿ ಪಕ್ಷದವರು ಈ ರೀತಿ ಮಾಡುತ್ತಿದ್ದಾರೆ ಎಂದು ಹೇಳಿದರು. ಅಕ್ರಮ, ಅನ್ಯಾಯ ಮಾಡತಕ್ಕ ವ್ಯಕ್ತಿಯನ್ನು ತೆಗೆಯುವುದಕ್ಕೆ ಕ್ರಮ ಉಂಟು. ಅದರ ಪ್ರಕಾರ ನೋಟೀಸ್ ಕೊಟ್ಟು ಎಕ್ಸಪ್ಲನೇಷನ್ ತೆಗೆದುಕೊಂಡು ತೆಗೆಯಿರಿ, ಬೇಡ ಎಂದು ಹೇಳುವುದಿಲ್ಲ. Chairman and other members shall hold office at the pleasure of the Government ಎಂದು blank cheque ಕೊಟ್ಟಿರುವುದು ನ್ಯಾಯವಾದುದಲ್ಲ, ಒಪ್ಪತಕ್ಕದ್ದಲ್ಲ. ಈ ಕಲಮನ್ನು ತೆಗೆಯಬೇಕು ಎಂದು ಒತ್ತಾಯಪೂರ್ವಕವಾಗಿ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. A party which professes in the name of democracy every action of theirs, is acting against democracy. That is what I am trying to explain. ನಾನು ಕೇಳತಕ್ಕದ್ದು ಇಷ್ಟೆ. ಈ ಕಲಮನ್ನು ಕಿತ್ತುಹಾಕಿ. ಕಿತ್ತು ಹಾಕತಕ್ಕದ್ದು ಬೇಡ ಎನ್ನುವ ಪಕ್ಷದಲ್ಲಿ, ನ್ಯಾಯವಾದ ರೀತಿಯಲ್ಲಿ ಅದನ್ನು ಮಾಡಿ.

Sri K. H. RANGANATH :—You accept the basic principle involved in that particular clause *viz.*, that the Board will have to be there during the pleasure of the Government.

Sri T. R. SHAMANNA :—I am trying to argue only with a view to avoid undesirable persons from occupying those places and for that there must be a proof to show that he is an incapable person. ಆದುದರಿಂದ ಮೊದಲನೆಯದಾಗಿ ಇಲ್ಲಿರತಕ್ಕ ಎಲ್ಲರೂ ಒಪ್ಪತಕ್ಕದ್ದು ಒಂದು ನೀತಿ, ನಿಯಮ ಪ್ರಕಾರ ತೆಗೆಯುವುದಕ್ಕೆ ಪ್ರಯತ್ನ ಪಡಬೇಕೇ ಹೊರತು ಬ್ಲಾಂಕ್ ಚೆಕ್ ಮಾತ್ರ ತೆಗೆದುಕೊಳ್ಳಬೇಡಿ ಎಂದು ಒತ್ತಿ ಹೇಳುವುದಕ್ಕೆ ಈ ಸಂದರ್ಭದಲ್ಲಿ ಇಷ್ಟಪಡುತ್ತೇನೆ. ಚೇರ್ಮನ್‌ರನ್ನು ಒಂದು ಸೂತ್ರದ ಗೊಂಬೆಯಹಾಗೆ ಇಟ್ಟುಕೊಳ್ಳತಕ್ಕಂಥ ಮತ್ತು ಬೋರ್ಡ್‌ಗೆ ಯಾರು ಬೇಕೋ ಅವರನ್ನು ಹಾಕತಕ್ಕಂಥ ತಿದ್ದುಪಡಿ ಏನಿದೆ ಅದನ್ನು ಖಂಡಿತವಾಗಿ ಒಪ್ಪತಕ್ಕದ್ದಲ್ಲ. ಚೇರ್ಮನ್ ಮತ್ತು ಬೋರ್ಡಿನ ಅಧಿಕಾರವನ್ನು ಮೊಟಕು ಮಾಡುವುದರ ಜೊತೆಗೆ ತಮ್ಮಪರವಾಗಿ ಅಧಿಕಾರ ನಡೆಸತಕ್ಕಂಥ ಹೌಸಿಂಗ ಬೋರ್ಡ ಕಮಿಷನರ್, ಚೀಫ

ಇಂಜನಿಯರ ಮತ್ತು ಸೆಕ್ರೆಟರಿಯವರನ್ನು ಸರ್ಕಾರದವರು ಹಾಕಬೇಕು. ಸರ್ಕಾರದವರು ಯಾರನ್ನು ಚುನಾವಣೆ ಮಾಡುತ್ತಾರೆ ಅಂಥವರನ್ನು ಕೆಲಸಕ್ಕೆ ಹಾಕಬೇಕು. ಹೌಸಿಂಗ ಬೋರ್ಡ ಆಕ್ಟಿನ ಪ್ರಕಾರ, ಅದು ತನ್ನ ಅಧಿಕಾರಿಗಳನ್ನು ನೇಮಿಸುವ ಅಧಿಕಾರವಿದ್ದರೂ, ಸರ್ಕಾರದವರು ಅಂಥ ನೇಮಕಾತಿಗೆ ಒಪ್ಪಬೇಕು ಎಂದು ಷರತ್ತು ಇದೆ. ಸ್ಟ್ಯಾಚುಟರಿ ಬೋರ್ಡ ಎಂದರೆ, ಅದಕ್ಕೆ ಪೂರ್ಣವಾದಂಥ ಅಧಿಕಾರ ಇರಬೇಕಾದುದು ಅವಶ್ಯಕವಾದುದು. ಅದರಲ್ಲಿ ತಮಗೆ ಯಾವುದು ಸರಿ ಎಂದು ಯೋಚನೆ ಮಾಡಿ, ತೆಗೆದುಕೊಳ್ಳತಕ್ಕ ಅಧಿಕಾರ ಇಲ್ಲದೇ ಇರತಕ್ಕ ಬೋರ್ಡ, ತಮ್ಮ ಮೇಲೆ ಅಧಿಕಾರ ಮಾಡತಕ್ಕಂಥ ಅಧಿಕಾರಿಗಳನ್ನು ತಂದು ಕೂಡಿಸಿದರೆ, ಯಾವ ಮರ್ಯಾದಸ್ತ ತಾನೇ ಆ ಜಾಗದಲ್ಲಿ ಕೂತು ಕೆಲಸಮಾಡುವುದಕ್ಕೆ ಸಾಧ್ಯವಾಗುತ್ತದೆ ? ನಮಗೆ ಗೊತ್ತಿದೆ, ಅನೇಕ ಸಂದರ್ಭಗಳಲ್ಲಿ ....

Mr. Deputy Speaker :—There are a number of amendments and the Hon. member will have occasion to speak on each amendment.

Sri T. R. SHAMANNA :—The Housing Commissioner has been heven virtually all the powers of running the Board. ಹೌಸಿಂಗ್ ಕಮೀಷನರಿಗೆ ಸರ್ವಾಧಿಕಾರ ಇರುವ ಸಂದರ್ಭದಲ್ಲಿ ಬೋರ್ಡನ್ನು ಏಕೆ ಸೃಷ್ಟಿಸಿ ಮಾಡಬೇಕಾಗಿತ್ತು ? ಸರ್ಕಾರದ ಒಂದು ಡಿಪಾರ್ಟಮೆಂಟ ಎಂದು ಏಕೆ ಮಾಡಬಾರದಾಗಿತ್ತು ? ತಪ್ಪಿದ್ದರೆ ಬೋರ್ಡಿನ ಮೇಲೆ ಗೂಬೆ ಕೂಡಿಸುವುದು. ಅನುಕೂಲಬೇಕಾದರೆ ಬೋರ್ಡಿನ ಮುಖಾಂತರ ಮಾಡಿಸುವುದು. ಇಂತಹ ಬೋರ್ಡನ್ನು ಇಟ್ಟುಕೊಂಡರೆ ಏನು ಪ್ರಯೋಜನ ? ಸಿಟಿ ಇಂಪ್ರೂವಮೆಂಟ್ ಟ್ರಸ್ಟ ಬೋರ್ಡ ಚೇರ್ಮನ್ನನ್ನು ಕೇಳಿದೆ. ಚೇರ್ಮನ ಸರ್ಕಾರಕ್ಕೆ ೭೫ ಲಕ್ಷ ರೂಪಾಯಿ ಕೊಟ್ಟಿದ್ದಾರೆ, ನಿಮಗೆ ಯಾವರೀತಿ ಅಧಿಕಾರ ಯಾರು ಕೊಟ್ಟರು ಎಂದು ಕೇಳಿದರೆ, ಅವರು, ನಾವು ಬ್ಯಾಂಕಿನಲ್ಲಿ ಇದ್ದ ದುಡ್ಡು ತೆಗೆದು ಸರ್ಕಾರಕ್ಕೆ ಲೋನ ಕೊಟ್ಟಿದ್ದೇವೆ ಎನ್ನುವ ರೀತಿ ಹೇಳಿದರು. ತಾವು ಹೇಳುವ ರೀತಿಯಲ್ಲಿ ಅನೇಕ ಕೆಲಸಗಳನ್ನು ಅವರು ಮಾಡಬೇಕಾಗುತ್ತದೆ. ಟ್ರಸ್ಟ ಮನಿ, ಇವರು ದುರುಪಯೋಗ ಮಾಡಿರುವುದರಿಂದ, ಬ್ರೀಚ್ ಆಫ್ ಟ್ರಸ್ಟ ಎಂದು ಹೇಳುತ್ತೀರಾ ?

ಹೌಸಿಂಗ್ ಕಮಿಷನರ್ ಮತ್ತು ಚೀಫ್ ಇಂಜಿನಿಯರ್ ಇವರನ್ನು ಸರ್ಕಾರದವರು ನೇಮಕ ಮಾಡಿ ಈ ಬೋರ್ಡಿನ ಮೇಲೆ ಹೇರಿರತಕ್ಕ ವ್ಯವಸ್ಥೆ ಏನು ಇದೆ ಅದು ಸಮಂಜಸವಾದುದು ಅಲ್ಲ. ಏಕೆಂದರೆ ಇದು ಒಂದು ಸ್ಟ್ಯಾಚ್ಯುಟರಿ ಬೋರ್ಡ ಆಗಿರುವುದರಿಂದ ಸರ್ಕಾರದವರು ಒಂದು ಪೆನಲ್ ಆಫ್ ನೇಮ್ಸ ಅದರು ಕಳುಹಿಸಿ ಅದರಲ್ಲಿ ಯಾರನ್ನಾದರೂ ಚುನಾವಣೆ ಮಾಡಿ ಎಂದು ಹೇಳಬಹುದಾಗಿತ್ತು. ಅದರಿಂದ ಅಧಿಕಾರಿಗಳು ಚುನಾಯಿಸಿ ಅವರಿಗೆ ಸಂಬಳ ಗೊತ್ತುಮಾಡಿ ಅವರು ಮಾಡತಕ್ಕ ಕೆಲಸ ಇಂಥಾದ್ದು ಎಂದು ಪ್ರತಿಯೊಂದು ಸರ್ಕಾರದ ಆಧೀನದಲ್ಲಿಟ್ಟುಕೊಂಡು ಕಮಿಷನರಿಗೆ ಸರ್ವಾಧಿಕಾರ ಕೊಟ್ಟು ನಾಮಕಾವಾಸ್ತೆ ಬೋರ್ಡ ಸೃಷ್ಟಿಸಿ ಮಾಡುವುದರಿಂದ ಸಾರ್ವಜನಿಕರಿಗೆ ಅದರಿಂದ ಪ್ರಯೋಜನ ವಾಗುತ್ತದೆಯೇ ಎಂದು ನೋಡಬೇಕು. ಪೆಡ್ಡೂಲ್ಡ್ ಕ್ಯಾಸ್ಟ್ಸಗೆ ಮತ್ತು ಬಡವರಿಗೆ ಮನೆಗಳನ್ನು ಕಟ್ಟಿಸಿಕೊಡುವ ಕಾರ್ಯಕ್ರಮ ಏನು ಹಾಕಿಕೊಂಡಿದ್ದಾರೋ ಅದರ ಬಗ್ಗೆ ಯಾವ ವಿಧವಾದ ವಾದವನ್ನು ನಾನು ಹೇಳುವುದಿಲ್ಲ. ಅನೇಕ ಮನೆಗಳನ್ನು ಕಟ್ಟಿಸತಕ್ಕ ಯೋಗ್ಯತೆ ಇರತಕ್ಕವರಿಗೆ, ಮನೆ ಇದ್ದುಕೊಂಡು ಟ್ರಸ್ಟ್ ಬೋರ್ಡ ಸೈಟುಗಳನ್ನು ತೆಗೆದುಕೊಳ್ಳತಕ್ಕ ಮನುಷ್ಯರಿಗೆ ಮತ್ತು ಬೇರೆ ಬೇರೆ ರೀತಿಯಲ್ಲಿ ಅನುಕೂಲ ಇದ್ದವರಿಗೆ ಅನುಕೂಲ ಮಾಡಿಕೊಡಬೇಕು ಎಂದು ಏನೂ ಹೇಳುವುದಿಲ್ಲ. ವಾಟರ್ ಸಪ್ಲೈ ಮತ್ತು ಸಿವರೇಜ್ ಬೋರ್ಡಿನ ನಿಯಮಾವಳಿ ಪ್ರಕಾರ ಅದರ ಲೆಕ್ಕ ಪತ್ರಗಳನ್ನು ಮತ್ತು ಅದರ ರೂಲ್ಸ ಮತ್ತು ರೇಗ್ಯೂಲೇಷನ್‌ಗಳನ್ನು ಈ ಸದನದ ಮುಂದಿಡಲು ಒಂದು ಅವಕಾಶ ಮಾಡಿಕೊಂಡಿದ್ದಾರೆ. ಆದರೆ ಅದೇ ರೀತಿ ಅವಕಾಶ ಈ ಒಂದು ಬೋರ್ಡಿನ ಬಗ್ಗೆ ಇಲ್ಲ. ಅಂತಹ ಒಂದು ಅವಕಾಶವನ್ನು ಮಾಡಿಕೊಟ್ಟು ಈ ಬೋರ್ಡಿನ ನಡವಳಿಕೆಗಳ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕು. ಈ ಬೋರ್ಡ್ ಗಳನ್ನು ಅಥವಾ ಕಾರ್ಪೊರೇಷನ್‌ಗಳನ್ನು ಸೃಷ್ಟಿಮಾಡತಕ್ಕ ಉದ್ದೇಶವಾದರೂ ಆಡಳಿತದಲ್ಲಿರುವ ರೆಡ್ ಟೇಪಿಸಮ್ ತಪ್ಪಿಸುವುದಾಗಿದೆ ಎಂದು ಈ ಬೋರ್ಡಗಳನ್ನು ಸೃಷ್ಟಿಸಿ ಮಾಡುತ್ತಾರೆ. ಈ ಬೋರ್ಡ್‌ಗಳು ಕೆಲಸಮಾಡುವ ರೀತಿ ನಾವು ನೋಡಿದರೆ ಖರ್ಚುಗಳು ಜಾಸ್ತಿ ಆಯಿತೇ ಹೊರತು ಜನಗಳ ಹಿತದೃಷ್ಟಿಯಿಂದ ಅದರಿಂದ ಹೆಚ್ಚಿಗೆ ಸಾಧನವಾಗಲಿಲ್ಲ. ವಾಟರ ಸಪ್ಲೈ ಮತ್ತು ಸಿವರೇಜ್ ಬೋರ್ಡಿನವರು ಏಕದಮ್ ನೀರಿನ ದರ ಹೆಚ್ಚಿಸಿದರು, ಎಲೆಕ್ಟ್ರಿಸಿಟಿ ಬೋರ್ಡ ಸೃಷ್ಟಿಸಿ ಆದ ಕೂಡಲೇ ಎಲೆಕ್ಟ್ರಿಸಿಟಿ ದರ ಏರುತ್ತಾ ಹೋಗುತ್ತಿದೆ. ಹೀಗಿರುವಾಗ ಸರ್ಕಾರದವರು ಕಮಿಷನರನ್ನು, ಇಂಜಿನಿಯರನ್ನು, ತಮಗೆ ಬೇಕಾದವರನ್ನು ಹಾಕಿಕೊಳ್ಳುವ ಪರಿಸ್ಥಿತಿ ಬಂದಾಗ ಖಂಡಿತವಾಗಿ ಪ್ರಜೆಗಳ ಹಿತದೃಷ್ಟಿಯಿಂದ ಇವರು ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ, ಫೈನಾನ್ಸ, ಮೆಮೋರ್ಯಾಂಡಮ್‌ನಲ್ಲಿ ಈ ಒಂದು ಬೋರ್ಡಿನಿಂದ ಯಾವ ಖರ್ಚು

ಸರ್ಕಾರಕ್ಕೆ ಇಲ್ಲ ಎಂದು ಹೇಳಿದ್ದಾರೆ, ಆದರೂ ಕೂಡ ಸರ್ಕಾರದವರು ಕೊಟ್ಟಿಂಥ ಹಣವನ್ನು ಉಪಯೋಗಿಸಿ ಜಾಗಗಳನ್ನು ತೆಗೆದುಕೊಂಡು ಮನೆಗಳನ್ನು ಕಟ್ಟುವಾಗ ಸರ್ಕಾರದ ಕಮಿಟಮೆಂಟ್ ಇದ್ದೇ ಇರುತ್ತದೆ, ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಇದರಲ್ಲಿ ಉಪಯೋಗಿಸುವ ಹೆಚ್ಚಿನ ಭಾಗ ಹಣ ಸರ್ಕಾರದ ಹಣ ಇರುತ್ತದೆ. ಈ ಬೋರ್ಡಿನಲ್ಲಿ ಅಧಿಕಾರಿಗಳನ್ನು ತೆಗೆದುಕೊಳ್ಳುವ ಬಗ್ಗೆ ಪಬ್ಲಿಕ್ ಸರ್ವೀಸ್ ಕಮಿಷನ್‌ಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಆ ರೀತಿ ಮಾಡಿರುವುದು ಸರಿ ಎಂದು ಭಾವಿಸುತ್ತೇನೆ. ಆದರೆ ಯಾವ ನೇಮಕಾತಿ ಮಾಡಬೇಕಾದರೂ ಕೂಡ ಸರ್ಕಾರದ ಅನುಮತಿ ತೆಗೆದುಕೊಳ್ಳಬೇಕೆಂದು ಇದೆ, ಹೀಗೆ ನೇಮಕಾತಿಯಲ್ಲಾಗಲಿ. ಒಂದು ಪ್ರೊಗ್ರಾಂ ಮಾಡುವುದರಲ್ಲಾಗಲಿ, ಅಥವಾ ಅವರು ಮಾಡುವ ಪ್ರತಿಯೊಂದು ವಿಚಾರದಲ್ಲಿಯಾಗಲಿ, ಸರ್ಕಾರ ತನ್ನ ಹಸ್ತಕ್ಷೇಪ ಮಾಡತಕ್ಕದ್ದು ಎಂದು ಇರುವಾಗ ಅದು ಯಾವ ರೀತಿ ಸ್ವಾಚ್ಛುಟರಿ ಬೋರ್ಡಾಗುತ್ತದೆ. ಕೊನೆಯದಾಗಿ ನಾನು ಕೇಳತಕ್ಕದ್ದು ಇಷ್ಟೇ, ಅನೇಕರು ಹೌಸಿಂಗ್ ಬೋರ್ಡನ್ನು ನಂಬಿಕೊಂಡು ತಮಗೆ ಇರತಕ್ಕ ಅಲ್ಪಸ್ವಲ್ಪ ದುಡ್ಡನ್ನು ಹಾಕಿ ಸೈಟುಗಳನ್ನು ತೆಗೆದುಕೊಂಡು ಸಾಲಕ್ಕಾಗಿ ಅರ್ಜಿಯನ್ನು ಹಾಕಿಕೊಂಡಿದ್ದಾರೆ. ಹಿಂದೆ ಮುಖ್ಯ ಮಂತ್ರಿಗಳು ಮಾರ್ಚ್ ತಿಂಗಳ ವರೆಗೆ ಯಾರು ಯಾರು ಅರ್ಜಿ ಹಾಕಿದ್ದಾರೋ ಅವರಿಗೆ ಸಾಲ ಕೊಡುತ್ತೇವೆಂದು ಒಂದು ಆಶ್ವಾಸನೆ ಕೊಟ್ಟಿದ್ದರು. ಅನೇಕ ಬಡವರು ಈ ರೀತಿ ಸೈಟುಗಳನ್ನು ತೆಗೆದುಕೊಂಡಿರುವವರಿದ್ದಾರೆ. ಅವರಲ್ಲಿ ಹಣವಂತರು ಇದ್ದಾರೆ ಅವರಿಗೆ ಸಹಾಯಮಾಡಿ ಎಂದು ಹೇಳುವುದಿಲ್ಲ. ತಾವು ಎಷ್ಟು ಪೆಂಡಿಂಗ್ ಅರ್ಜಿಗಳು ಇವೆ ಎಂದು ನೋಡಿ ಯಾರಿಗೆ ನ್ಯಾಯವಾದಂತ ರೀತಿಯಲ್ಲಿ ಸಾಲವನ್ನು ಮಂಜೂರು ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಇನ್ನೂ ಒಮ್ಮೆ ಪರಿಶೀಲನೆ ಮಾಡಿ ಎಂದು ಕೇಳಿಕೊಳ್ಳುತ್ತೇನೆ.

Mr. Deputy Speaker :—The Hon. Member may continue his speech tomorrow. The Hon. Minister for Public Works will now make a statement.

STATEMENT BY THE MINISTER FOR PUBLIC WORKS AND ELECTRICITY

Re : Enquiry by the Vigilance Commissioner in regard to missing of Cement and Steel.

Sri H. M. CHANNABASAPPA :—Mr. Deputy Speaker, I promised to make a statement on the progress made in regard to the investigation. I will read it :

On receipt of phone message from Government on the afternoon of 20-3-1974, the Superintending Engineer, Technical Audit Cell, State Vigilance Commission, proceeded immediately to the Division Offices and took charge of necessary records pertaining to cement and steel, *viz.*, the indent, invoices, stock, issue registeres, etc. The Executive Engineer, Bangalore Division, was also asked to arrange for the necessary labour and lorries for weighing the steel the next morning. On 21-3-1974 at about 9.30 a. m. five lorries and the services of 25 labourers were utilised for weighing about 15 tonnes of steel upto noon today. About 60 to 65 tonnes have yet to be weighed. Much of the steel which is not in good condition could not be easily lifted in the lorries as they had been twisted and stocked there. Therefore, considerable time is being taken to complete the weighment. The Vigilance Commissioner has inspected these spots this morning By increasing the labour strength and indenting for two trailors from Karnataka Electricity Board to facilitate movement of longer lengths of steel to the weighing